# ಭಕ್ತಿಯ ಅನುಭೂತಿ

■ ವಿ. ವಿಜಯೇಂದ್ರ ರಾವ್

ಒಂದು ಗ್ರಾಮದಲ್ಲಿ ಬಹಳ ವರ್ಷಗಳಿಂದ ಶಿವಭಕ್ತನಾದ ರಂಗಣ್ಣನು ಅತಿ ಭಕ್ತಿಯಿಂದ ತನ್ನ ಆರಾಧ್ಯ ಪರಶಿವನನ್ನು ಪೂಜಿಸುತ್ತಾ, ಪ್ರಾರ್ಥಿಸುತ್ತಾ ಬರುತ್ತಿದ್ದನು. ಒಂದು ಅವನಿಗೆ ಎಷ್ಟೊಂದು ವರ್ಷಗಳ ಕಾಲ ನಿಷ್ಠೆಯಿಂದ ಪ್ರಾರ್ಥಿಸಿದರೂ ಒಂದು ದಿನವೂ ನನ್ನ ಭಕ್ತಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾಗಿ ನನ್ನನ್ನು ವಿಚಾರಿಸಲೇ ಇಲ್ಲ ಎಂದು ಬಹಳ ಬೇಸರ ಆಯಿತು. ಅಂದೇ ಅವನು ಇನ್ನುಮುಂದೆ ನಾನು ಶಿವನನ್ನು ಪೂಜಿಸುವುದೇ ಇಲ್ಲವೆಂದು ನಿಶ್ಚಯಿಸಿ, ಆ ಶಿವನ ವಿಗ್ರಹವನ್ನು ಒಳಕೋಣೆಯ ಅಟ್ಟದ ಮೇಲೆ ಇಟ್ಟುಬಿಟ್ಟ. ನಂತರ ವಿಷ್ಣುವನ್ನು ಪೂಜಿಸಲು ಪ್ರಾರಂಭಿಸಿದನು.

ಶಿವನು ಅಭಿಷೇಕ ಪ್ರಿಯನಾದರೆ, ವಿಷ್ಣು ಅಲಂಕಾರ ಪ್ರಿಯ ಎಂದು ಅವನಿಗೆ ವಿಧ, ವಿಧದ ಅಲಂಕಾರ ಮಾಡಿ, ಊದುಬತ್ತಿ, ಸಾಂಬ್ರಾಣಿ ಹಚ್ಚಿ ಮಂಗಳಾರತಿ ಮಾಡುವಾಗ, ಅಟ್ಟದ ಮೇಲೆ ಇಟ್ಟಿದ್ದ ಶಿವನ ವಿಗ್ರಹ ಜ್ಞಾಪಕ ಬಂದು, ಅಯ್ಯೋ, ಶಿವನಿಗೆ ಇದೆಲ್ಲಾ ಹಿಡಿಸುವುದಿಲ್ಲವೆಂದು ಅವಸರವಸರವಾಗಿ ಅಟ್ಟ ಏರಿ ಅಲ್ಲಿಟ್ಟಿದ್ದ ಶಿವನ ವಿಗ್ರಹದ ಮೂಗು, ಬಾಯಿಗೆ ಒಂದು ಒಳ್ಳೆಯ ಬಟ್ಟೆಯನ್ನು ಬಿಗಿಯಾಗಿ ಸುತ್ತಿ ಅಟ್ಟದಿಂದ ಇಳಿಯುತ್ತಿದ್ದ. ಮರು ಕ್ಷಣವೇ ಅವನ ಎದುರಿಗೆ ಸಾಕ್ಷಾತ್ ಶಿವನೇ ಪ್ರತ್ಯಕ್ಷವಾಗಿ ನಿಂತಿದ್ದ. ಅದನ್ನು ಕಂಡು ತನ್ನ ಕಣ್ಣುಗಳನ್ನೇ ಅವನು ನಂಬಲಿಲ್ಲ. ಆಮೇಲೆ ಸಾವರಿಸಿಕೊಂಡು ಅಲ್ಲಾ, ಪರಮಾತ್ಮನೇ, ನಾನು ಅಷ್ಟು ವರ್ಷ ನಿನ್ನನ್ನು ನಿಷ್ಠೆಯಿಂದ ಪೂಜಿಸಿದಾಗ, ಒಂದು ದಿನವೂ ನನಗೆ ಕಾಣಿಸಿಕೊಳ್ಳಲಿಲ್ಲ. ಆದರೆ, ಈಗ ನೀನು ಬೇಡವೇ ಬೇಡ ಅಂತ ವಿಷ್ಣುವನ್ನು ಪೂಜಿಸತೊಡಗಿದಾಗ ನೀನು ದಿಢೀರನೆ ಕಾಣಿಸಿಕೊಂಡಿದ್ದೀಯಾ? ಏನಪ್ಪಾ ನಿನ್ನ ಲೀಲೆ ಎಂದು ಕೇಳಿದಾಗ, ಶಿವನು ನಕ್ಕು, ಭಕ್ತನೇ, ಇಷ್ಟು ದಿನ ನೀನು ನನ್ನನ್ನು ಒಂದು ನಿರ್ಜೀವ ವಸ್ತುವಿನ ಹಾಗೆ ನೋಡುತ್ತಾ ಪೂಜಿಸುತ್ತಿದ್ದೆ. ಆದರೆ, ಇಂದು ನೀನು ನನಗೆ ತೊಂದರೆಯಾಗುತ್ತದೆ ಎಂದು ಯಾವಾಗ ನನ್ನ ಬಾಯಿ, ಮೂಗಿಗೆ ಬಟ್ಟೆ ಕಟ್ಟಿ ಆ ವಿಗ್ರಹದಲ್ಲಿ ನಾನು ಜೀವಂತವಾಗಿದ್ದೇನೆ ಎಂದು ನಂಬಿದೆಯೋ, ಆ ಕ್ಷಣದಲ್ಲಿ ನಾನು ಸಂತೃಪ್ತನಾಗಿ ನಿನಗೆ ದರ್ಶನ ಕೊಡಬೇಕು ಎಂದು ನಿಶ್ಚಯಿಸಿ ನಿನಗೆ ಕಾಣಿಸಿಕೊಂಡಿದ್ದೇನೆ. ನಿನ್ನ ಭಕ್ತಿಗೆ ಮೆಚ್ಚಿದೆ. ನೀನು ಯಾರಿಗೆ ಪೂಜಿಸಿದರೂ ಅದು ಕೊನೆಗೆ ಸೇರುವುದು ನೀನು ನಂಬಿರುವ ದೈವಕ್ಕೇನೆ. ನಿನಗೆ ಸದಾ ಶುಭವಾಗಲಿ ಎಂದು ಆಶೀರ್ವದಿಸಿ ಅಂತರ್ಧಾನನಾದನು.



ಚಿತ್ರ: ಶಶಿಧರ ಹಳೇಮನಿ

ಆದ್ದರಿಂದ, ಮಕ್ಕಳೇ ನೀವು ಯಾವುದೇ ಕೆಲಸವನ್ನು ನಿಶ್ಕಲ್ಮಶದಿಂದ, ಶ್ರದ್ಧೆಯಿಂದ ಮಾಡಿದರೆ ನಿಮಗೆ ಜಯ ದೊರಕುವುದರಲ್ಲಿ ಸಂದೇಹವೇ ಇಲ್ಲ....! ■

## ಕನಸು ನನಸು

■ ಅನರ್ಘ್ಯ ಎಸ್.

10ನೇ ತರಗತಿ ಅಮಟೆಕೊಪ್ಪ

ಕತ್ತಲೆಂದರೆ ಅಂಧಕಾರವಲ್ಲ  
ಬೆಳಕಿಗಾಗಿ ಹಂಬಲಿಸಿ  
ಮೌನದಿ ವ್ರತ ಕೈಗೊಂಡ ದೀವಿಗೆ  
ಸೋಲೆಂದರೆ ಅಂತ್ಯವಲ್ಲ  
ಗಲುವಿನ ಹರಕೆಗೆ  
ಸಂಕಲ್ಪ ತೊಡುವ ಸೋಪಾನ  
ಕನಸೆಂದರೆ ಬರೀ  
ಕನವರಿಕೆಯಲ್ಲ  
ಬಿಸಿಲುಗುದುರೆ ಏರಿ  
ಹೊರಡುವ ಹಳಹಳಿಕೆಯೂ ಅಲ್ಲ  
ಕನಸು ಕಣ್ಣೆದುರಿನ ಗುರಿ  
ಕನಸು ಹೋರಾಟ ಬಯಕೆಯ ಹಾದಿ  
ಅದುವೇ ನನಸೆಂಬ ಕಾದಂಬರಿಯ ಮುನ್ನುಡಿ. ■